ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ**402/2013**

ದಿನಾಂಕ **17.10.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ-2

<u>ಪಾಟೀ ಸವಾಲುಃ **1** ರಿಂದ **3** ನೇ ಪ್ರತಿವಾದಿಯ ಪರ ಶ್ರೀ.ಎಸ್.ಆರ್.ಕೆ ವಕೀಲರಿಂದಃ</u>

ಈ ದಾವಾದಲ್ಲಿ ದಾಖಲಿಸಿರು ಎಲ್ಲಾ ಸ್ವತ್ತುಗಳು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ದಾಸಣ್ಣನಿಗೆ ಕ್ರಯದ ಮೂಲಕ ಬಂದಿವೆ ದಾಸಣ್ಣ ರವರ ಸ್ವಯಾರ್ಜಿತ ಸ್ವತ್ತುಗಳಾಗಿದ್ದರು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪಿತ್ರಾರ್ಜಿತ ಸ್ವತ್ತುಗಳು ಎಂದು ತಪ್ಪಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ದಾಸಣ್ಣ ಮತ್ತು ಅವರ ಮಕ್ಕಳು ದಾವಾ ಸ್ವತ್ತುಗಳನ್ನು ವಿಭಾಗ ಪತ್ರದ ಮೂಲಕ ಹಂಚಿಕೊಂಡಿದ್ದಾರೆ ಎಂದರೆ ಸರಿ. ದಾಸಣ್ಣ ರವರ ಸ್ವಯಾರ್ಜಿತ ಸ್ವತ್ತುಗಳಾದ ಕಾರಣ ವಾದಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇಲ್ಲ ಎಂದರೆ ವಾದಿಗಳು ಮತ್ತು ಪ್ರತಿವಾದಿಗಳು ಸ್ವತ್ತುಗಳನ್ನು ಉಳುಮೆ ಮಾಡಿಕೊಂಡು ಇದ್ದಾರೆ ಎಂದು ನುಡಿಯುತ್ತಾರೆ. ವಿಭಾಗ ಪತ್ರದಂತೆ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳು ಅವರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.

2. ದಾವಾ ಅನುಸೂಚಿ ಸ್ವತ್ತು 4 ನ್ನು 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಬಗ್ಗೆ ನನಗೆ ಏನೂ ಗೊತ್ತಿಲ್ಲದೆ ಇದ್ದರೂ ವಾದಿ ನನಗೆ ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 4 ನೇ ಪ್ರತಿವಾದಿಯ ಪರ ಶ್ರೀಮತಿ. ಒ.ಟಿ.ಎ ವಕೀಲರಿಂದಃ ಇಲ್ಲ ಎಂದು ನುಡಿದಿರುತ್ತಾರೆ.</u>

ಪಾಟೀ ಸವಾಲುಃ 6 ನೇ ಪ್ರತಿವಾದಿಯ ಪರ ಶ್ರೀ.ಆರ್.ವಿ ವಕೀಲರಿಂದಃ

3. ವಾದಿಗಳ ಹೆಸರು ತಿಮ್ಮಾರೆಡ್ಡಿ ಶ್ರೀರಾಮರೆಡ್ಡಿ, ಸೀನಪ್ಪ, ರವಿ. ಪ್ರತಿವಾದಿಗಳ ಹೆಸರು ರವಿ, ಸೀನಪ್ಪ, ತಿಮ್ಮಾರೆಡ್ಡಿ ಉಳಿದ ಪ್ರತಿವಾದಿಗಳ ಹೆಸರು ನನಗೆ ಗೊತ್ತಿಲ್ಲ. ದಾವಾ ಎಲ್ಲಾ ಸರ್ವೆ ನಂಬರ್ ಗಳ ಚೆಕ್ಕುಬಂದಿ ವಿಸ್ತೀರ್ಣ ಹೇಳಲು ಆಗುವುದಿಲ್ಲ, ಆದರೆ ನನ್ನ ಜಮೀನಿನ ಪಕ್ಕದಲ್ಲಿರುವ ಜಾಗದ ಚೆಕ್ಕುಬಂದಿ ಹೇಳುತ್ತೇನೆ. ನನ್ನ ಜಮೀನಿನ ಪಕ್ಕ ಸ.ನಂ.47 ಇದೆ. ಅದು ಒಟ್ಟು ಸುಮಾರು 15 ಎಕರೆ ಇರಬಹುದು. ದಾವಾ ಅನುಸೂಚಿ 4 ರ ಸ್ವತ್ತಿನ ಬಗ್ಗೆ ಮಾಹಿತಿ ಇದೆಯಾ ಎಂದರೆ ಮಾಹಿತಿ ಇದೆ. ವಾದಿಗಳು ಮತ್ತು ಪ್ರತಿವಾದಿಗಳು ಉಳುಮೆ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದಾರೆ.

4. ದಾವಾ ಅನುಸೂಚಿ ನಂ.4 ನ್ನು 1 ನೇ ಪ್ರತಿವಾದಿಗೆ ನಂಜಮ್ಮ ಅವರ ಕಡೆಯಿಂದ ಒ.ಎಸ್.ನಂ.478/1994 ರಂತೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ 1 ನೇ ಪ್ರತಿವಾದಿಗೆ ಮುಟೇಶನ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.60/2 ಡಿ, 87/2 ಆಸ್ತಿಗಳನ್ನು ವಾದಿ ತಿಮ್ಮಾರೆಡ್ಡಿಗೆ ಕೊಟ್ಟಿದ್ದು ಅವುಗಳನ್ನು ಅವರು ಮಾರಾಟ ಮಾಡಿ ಹಣ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬೇರೆ ಆಸ್ತಿಗಳಿಗೆಲ್ಲಾ ವಾದಿ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 4 ರ ಸ್ವತ್ತು 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದರೆ ದಾವಾ ಸ್ವತ್ತಿನ ಸ್ವಾಧೀನದಲ್ಲಿ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳು ಇರುವುದು ಮಾತ್ರ ಗೊತ್ತು. ದಿ.25.05.2012 ರಿಂದ 6 ನೇ ಪ್ರತಿವಾದಿಯೇ ದಾವಾ ಅನುಸೂಚಿ 4 ರಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಾನು ನೋಡಿಲ್ಲ.

5. ದಾವಾ ಅನುಸೂಚಿ 4 ರ ಸ್ವತ್ತಿನಲ್ಲಿ ಬೋರು ಯಾರು ಹಾಕಿಸಿದ್ದಾರೆ ಎಂದರ ವಾದಿ ಮತ್ತು 1 ನೇ ಪ್ರತಿವಾದಿ ಹಾಕಿಸಿದ್ದಾರೆ. 6 ನೇ ಪ್ರತಿವಾದಿಯೇ ಅನುಸೂಚಿ 4 ರ ಸ್ವತಿನಲ್ಲಿ ಬೋರು ಹಾಕಿಸಿದ್ದಾರೆ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ

ಅನುಸೂಚಿ 4 ರ ಸ್ವತ್ತಿನ ಬೋರ್ ವೆಲ್ ಹಾಕಿಸಲು ಕರೆಂಟ್ ನ್ನು ಅವರವರ ಜಾಗಕ್ಕೆ ವಾದಿ ಮತ್ತು 1 ನೇ ಪ್ರತಿವಾದಿ ತಂದಿದ್ದಾರೆ. ಬೋರು ಹಾಕಿಸಿದ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಅನುಸೂಚಿ 4 ರ ಸ್ವತ್ತಿನಲ್ಲಿ ಮಾವಿನ ಮರ, ತೆಂಗು ಮತ್ತು ತೋಟ ಇದೆ. 6 ನೇ ಪ್ರತಿವಾದಿ ದಾವಾ ಅನುಸೂಚಿ 4 ರ ಸ್ವತ್ತಿನಲ್ಲಿ ಬೋರು ತೋಡಿಸಿ, ಶೆಡ್ ಹಾಕಿ, ಕ್ರಯಕ್ಕೆ ಪಡೆದಾಗಿನಿಂದಲೂ ಅವರೆ ಸ್ವಾಧೀನದಲ್ಲಿ ಇದ್ದರೆ ಎಂದರೆ ಸರಿಯಲ್ಲ 6 ನೇ ಪ್ರತಿವಾದಿ ದಾವಾ ಅನುಸೂಚಿ 4 ರ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದರೂ ನಾನು ವಾದಿ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>
(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ